At Ranjit
From 12-7-46
India To-Day
ಈಶ್ವರಲಾಲ್-ಚಾರ್ಲಿ-ರೋಸ್
ಪೃಥ್ವಿರಾಜ್ — ಪಾತ್ರವಹಿಸಿರುವ
ಇಂದಿನ ಭಾರತ

Regd. No. M 1299 SATYAVADI Fonnded 1917

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 · ಸಂಚಿಕೆ 242 | ಶನಿವಾರ 13-7-46 | ಬಿಡಿ ಪ್ರತಿ 3 ಪೈ

At Opera
2nd Glorious Week
LAVANGI
ರಾವ್ — ರುಕ್ಮಿಣಿ — ಜಯಮ್ಮ
ಪಾತ್ರವಹಿಸಿರುವ
ಲವಂಗಿ (ತಮಿಳು

ಮಹಾಪ್ರಧಾನರ ಮುಂದೆ ಕುಪಿತ ಸ್ತ್ರೀಯರ ಗಲಭೆ

ಕುಪಿತ ಸ್ತ್ರೀಯರ ಗಲಭೆ

ವಂದವಾಸು ಜು 12— ನೂರಾರು ಮಂದಿ ಬಿ ವಸ್ತು ಸಿ ಮಿಲ್ಲುಗಳ ಮುಷ್ಕರಗಾರರ ಗಂಪಿನಲ್ಲಿ ಅನೇಕ ಮಂದಿ ಸ್ತ್ರೀಯರು ಆವೇಶಪೂರಿತರಾಗಿ, ಮುನ್ನುಗ್ಗುತ್ತಾ, ಮಹಾಪ್ರಧಾನರಾದ ಶ್ರೀ ಪ್ರಕಾಶಂರವರು ಕಛೇರಿಗೆ ಬರುವಾಗ ಗಲಭೆ ಮಾಡಿ, ಬೈಗುಳ ಸುರಿಸಿದರು. ತಮ್ಮ ಕಷ್ಟವನ್ನು ಕಾಂಗ್ರೆಸ್ ಸರಕಾರ ನಿವಾರಿಸಲಿಲ್ಲ ಎಂಬುದೇ ಅವರ ಸಂಕಟ

ಒಳ್ಳೇ ಕೆಲಸ

ಡೇರ್ ಎಸ್ ಸಲಾಂ ಜು 11 — ದ. ಆಫ್ರಿಕಾ ಮಾರ್ಗವಾಗಿ ಇಲ್ಲಿಗೆ ಬಂದಿರುವ ಗಾಂಧೀಜಿ ಪುತ್ರ ಮಣಿಲಾಲರು ಬ್ರಿ ಮಂತ್ರಿಮಂಡಲ ನಿಯೋಗದ ಕಾರ್ಯ ಕುರಿತು ಪ್ರಶಂಸಿಸಿದರು.

ಕೋನುವಾರು ಗಲಭೆ

ಥಿಕಾನ್ಸ್ ಜು 12 — ಕೋನುವಾರ ಗಲಭೆ ನಡೆದು 12 ಮಂದಿಗೆ ಗಾಯವಾಗಿದೆ ಅನೇಕರು ದಸ್ತಗಿರಿ ಮಾಡಲ್ಪಟ್ಟರು.

ಉಪಾಧ್ಯಾಯರ ಮುಷ್ಕರ

ಲಕ್ನೊ ಜು 12 — ಸಂಯುಕ್ತ ಪ್ರಾಂತ್ಯದ ದೇಶ ಭಾಷಾ ಸ್ಕೂಲುಗಳ 45 ಸಾವಿರ ಮಂದಿ ಉಪಾಧ್ಯಾಯರು ತಾ|| 15 ರಿಂದ ಮುಷ್ಕರ ಹಿಡಿಯಲಿರುವರು. ಸಂಬಳ ಹೆಚ್ಚಿಸಿ ತುಟ್ಟಿ ಭತ್ಯ ಕೊಡಬೇಕಂತೆ!

ಸೀಮೆ ಎಣ್ಣೆ ಕಳ್ಳ ವ್ಯಾಪಾರ

ಸೇಲಂ ಜು 12 — ಇಲ್ಲಿ ಒಬ್ಬ ಎಣ್ಣೆ ವ್ಯಾಪಾರಿ ಒಬ್ಬ ಹಳ್ಳಿಯವನಿಗೆ 6 ಟಿಕ್ ಸೀಮೆಯೆಣ್ಣೆ ಟಿಕ್‌ಗಳನ್ನು ರೂ. 150 ಕ್ಕೆ ಮಾರಿದ್ದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟನು. ಒಂದು ಸೀಮೆಯೆಣ್ಣೆ ಟಿನ್ನಿಗೆ ನಿಗದಿ ಬೆಲೆ ರೂ. 5.

ಅಂಚೆ ಮಹಾ ಮುಷ್ಕರ

ಅಂಚೆ ಮುಷ್ಕರವು 25 ವರ್ಷಗಳ ಹಿಂದೆ 1920 ರಲ್ಲಿ ನಡೆದಿದ್ದಿತೆಂದು ಹೇಳಲಾಗಿದೆ.

ನವದೆಹಲಿ ಜುಲೈ 11 — ಅಂಚೆ ಮುಷ್ಕರ ಪೂರ್ಣವಾಗಿ ನಡೆದಿದೆ. ಬಾಲಚಮೂ ಮತ್ತು ಸ್ವಯಂಸೇವಕ ಸಹಾಯ ದೊರೆತಿದೆ.

ಶಿಲಾಂಗ್ ಜು 11 .... ಜನರಲ್ ಪೋಸ್ಟಾಫೀಸಿನಲ್ಲಿ ಮುಷ್ಕರ. ಹೊಸಬರು ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತಿದೆ. ಮುಷ್ಕರ ಹಿಡಿದಿರುವವರು ತಮಗೆ ಕೊಟ್ಟಿರುವ ಮನೆಬಿಡಿಬೇಕೆಂದೂ ಉಡುಪನ್ನು ವಾಪಸ್ ಕೊಡಬೇಕೆಂದೂ ಅಜ್ಞಾ ಮಾಡಲಾಗಿದೆ.

ಬೊಂಕಾಯಿ ಜು 11 — ಮುಷ್ಕರ ಪೂರ್ಣವಾಗಿದೆ. ಅಂಚೆ ಸಾಗಿದೆ ರೈಲು ಸ್ಟೇಷನ್ನಿನಲ್ಲಿ ಚೀಲಗಳ ರಾಶಿ ಬಿದ್ದಿದೆ.

ಸೈನ್ಯ ಶಾಖೆಯು ಡಿಲಿವರಿ ಸರ್ವಿಸ್ಸಿನವರನ್ನು ಕರೆಸಲು ಯೋಚಿಸಲಾಗಿದೆ. ಇಲ್ಲಿಯ ಪೋಸ್ಟ್ ಮಾಸ್ಟರ್ ಜನರೆಲ್ಲರೂ ಮುಷ್ಕರ ಹಿಡಿದಿರುವವರಿಗೆ 72 ಗಂಟೆಯೊಳಗೆ ವಾಪಸ್ ಕೆಲಸಕ್ಕೆ ಸೇರಬೇಕೆಂದೂ ತಪ್ಪಿದಲ್ಲಿ ಅವರ ಸ್ಥಾನಗಳಿಗೆ ಬೇರೆಯವರನ್ನು ನೇಮಿಸಿಕೊಳ್ಳಲಾಗುವುದೆಂದೂ ಎಚ್ಚರಿಸಿದ್ದಾರೆ.

ಮುಷ್ಕರಗಾರರು ಹೊಸದಾಗಿ ರೆಕ್ರೂಯಿಲ್‌ಗಳನ್ನು ತೆಗೆದುಕೊಳ್ಳುವುದನ್ನು ಅಡ್ಡಿ ಪಡಿಸಲು ಪಿಕೆಟಿಂಗ್ ನಡೆಸಿದರು.

—ಗಾಂಧೀಜಿ ಬುದ್ಧಿವಾದ—

ಪೂನಾದ ಒಬ್ಬ ಅಂಚೆಯವನು ಮುಷ್ಕರದ ಹಿಂದಿನ ದಿವಸ ಗಾಂಧೀಜಿಯವರಿಗೆ ಕಾಗದ ಕೊಡಲು ಹೋಗಿದ್ದಾಗ "ನಿಮ್ಮ ಮುಷ್ಕರವನ್ನು ಶಾಂತಿ ರೀತಿಯಿಂದ ನಡೆಸಿವರೆ, ನಿಮ್ಮ ವಿಜಯ ಖಂಡಿತ" ಎಂದು ಅವರು ತಿಳಿಸಿದರು.

'ಮೈಸೂರಿನಲ್ಲಿ ಆಹಾರಾಭಾವವಿಲ್ಲ'

ಮೈಸೂರು ಜಿಲ್ಲಾಧಿಕಾರಿಗಳು ನಡೆಸಿದ ಪತ್ರಿಕಾ ಸಮ್ಮೇಳನ

ಮೈಸೂರು ಜುಲೈ 13 — ಬೆಳಿಗ್ಗೆ 10 ಗಂಟೆಯಲ್ಲಿ ಜಿಲ್ಲಾಧಿಕಾರಿಗಳು ಪತ್ರಿಕಾ ಸಮ್ಮೇಳನ ನಡೆಸಿ ಮೈಸೂರಿನಲ್ಲಿ ಆಹಾರಾಭಾವವಿಲ್ಲವೆಂದು, ಕೆಳಗಿನ ಅಂಕಿಗಳ ದಾಸ್ತಾನನ್ನು ತಿಳಿಸಿದರು.

69795.94 ಮೂಟೆ ಭತ್ತ
416 ಮೂಟೆ ಸಕ್ಕೆ
10122.68 ಮೂಟೆ ಕೊಡಗು ಭತ್ತ
14032.24 ಮೂಟೆ ಅಕ್ಕಿ
19014.2 ಮೂಟೆ ರಾಗಿ
558.26 ಮೂಟೆ ಜೋಳ
164.19 ಮೂಟೆ ಗೋಧಿ
609.0 ಗೋಧಿ ಹಿಟ್ಟು
73.0 ಮೈದಾ ಹಿಟ್ಟು
46.0 ಮೂಟೆ ರವೆ

(ಸಮ್ಮೇಳನದ ವಿವರ ಸೋಮವಾರ ಪ್ರಕಟಿಸಲಾಗುವುದು)

ಜಿನ್ನರವರು

ಹೈದರಾಬಾದು ಜು 10 — ಇಲ್ಲಿಗೆ ಬಂದಿರುವ ಜಿನ್ನರನ್ನು ಹೈದರಾಬಾದು ಆಸ್ಟಿಕ್ ಸಂಘದ ಮತ್ತು ಉಸ್ಮೇನಿಯಾ ವಿಶ್ವವಿದ್ಯಾಲಯ ಸಂಘದ ಪ್ರತಿನಿಧ್ಯದವರು ಭೇಟಿ ಮಾಡಿದರು. ಬ್ರಿಟಿಷ್ ರೆಸಿಡೆಂಟರು ಜಿನ್ನರೊಡನೆ ಒಂದೂವರೆ ಗಂಟೆಕಾಲ ಮಾತುಕತೆ ನಡೆಸಿದರು ಜಿನ್ನರು ಬೀರೂರು ರಾಜಕುಮಾರರೊಡನೆ ಭೋಜನ ಪೂಡಿದರು. ತಾ|| 15 ರಲ್ಲಿ ಬೊಂಬಾಯಿಗೆ ಪ್ರಯಾಣ ಮಾಡುವರು.

ಕರಾಚಿ ಕಾರ್ಪೊರೇಷನ್ನಿನವರು ಇನ್ನು ಮುಂದೆ ತಮ್ಮ ಪಟ್ಟಣಕ್ಕೆ ಬರುವ ಹಿರಿಯರಿಗೆ ವನತಿ ಪತ್ರಿಕೆಯನ್ನು ಅರ್ಪಿಸುವ ಪದ್ಧತಿಯನ್ನು ಸಾಕುಮಾಡಲು ತೀರ್ಮಾನ ಮಾಡಿಕೊಂಡಿದ್ದಾರೆ.

ವಿವಿಧ ವರ್ತಮಾನ

ಲಾಹೋರು ಜು 10 — ರಚನಾತ್ಮಕ ಸಮಿತಿಯನ್ನು ಬಹಿಷ್ಕರಿಸಲು ಸಿಕ್ಖರು ತೀರ್ಮಾನಿಸಿದ್ದಾರೆ.

ಲಂಡನ್ ಜು 11 — ಎಲಿಜಬತ್ ರಾಜಕುಮಾರಿಯು ಬ್ಯಾಚಿಲರ್ ಆಫ್ ಮ್ಯೂಜಿಕ್ ಪ್ಯಾಸ್ ಮಾಡಿದಳು.

ಕೊಲಂಬೊ ಜು 10 — ಮುಷ್ಕರ ನಡೆಸುತ್ತಿದ್ದ ಭಾರತ ಕೂಲಿಗಾರರು ಕೆಲಸಕ್ಕೆ ಹೋದರು.

ಡಾಕಾ ಮತ್ತು ಅಹಮದಾಬಾದಿನ ಸ್ಥಿತಿ ತಹಬಂದಿಗೆ ಬಂದಿದೆ.

ಸ್ಟಾಲಿನ್ನರು ಟೆಹರಾನಿಗೆ ಭೇಟಿ ಕೊಡಲಿರುವರು.

ಇಂಗ್ಲೆಂಡಿನಲ್ಲಿ ವಿವಾಹ ವಿಚ್ಛೇದನ ಕಾನೂನು ಅನುಸರಿಸಿ ಕೆಲಸವು ಜಾಗ್ರತೆಯಲ್ಲಿ ನಡೆಯುವಂತೆ ಕಾನೂನಿನಲ್ಲಿ ಬದಲಾವಣೆಗಳನ್ನೂ ಮಾಡಲಿರುವರು.

ಈಜಿಪ್ಟಿನಲ್ಲಿ ವಿದೇಶೀಯರು ಸ್ಥಿರ ಆಸ್ತಿಯನ್ನೂ ಮಾಡಿಕೊಳ್ಳಲು ಆತಂಕ ಪಡಿಸುವ ಯಾವ ಕಾನೂನು ಇರುವದಿಲ್ಲ. ಅದರ ಅವಶ್ಯಕತೆಯು ಕೂಡ ಇಲ್ಲವೆಂದು ಅಲ್ಲಿಯ ಮಂತ್ರಿಯು ಹೇಳಿರುವನು. ಶ್ರೀ ಆಗಾಖಾನರವರು ಅಲ್ಲಿ ಒಂದು ದೊಡ್ಡ ಯಸ್ಟೇಟನ್ನು ಕೊಂಡುಕೊಂಡಿರುವರು.

ಬೆಂಗಳೂರು ಜು 12 — ಮುಷ್ಕರಗಾರರು ದೊಡ್ಡ ದೊಡ್ಡ ರಸ್ತೆಗಳಲ್ಲಿ ಮೆರವಣಿಗೆಯನ್ನು ಶಾಂತ ರೀತಿಯಿಂದ ನಡೆಸಿದರು. ಈ ಬೆಳಿಗೆ ನಡೆಸಿದ ಸಭೆಯಲ್ಲಿ ಅಂಚೆ ಮತ್ತು ತಂತೀ ಡೈರೆಕ್ಟರ್ ಜನರಲವರು ಮಾಡಿರುವ ಬೆದರಿಕೆಯನ್ನು ಖಂಡಿಸಿದರು.

ಪೂನಾ ಜು 11 — ಟೆಲಿಗ್ರಾಫ್ ಮತ್ತು ಟೆಲಿಫೋನ್ ಕೆಲಸಗಾರರೂ ಮುಷ್ಕರಕ್ಕೆ ಸೇರಿರುವರು.

ಅಹಮದಾಬಾದ್ ಜು 11 — ಮುಷ್ಕರಕ್ಕಾಗಿ ಕಾಗದಗಳನ್ನು ಕಟಿಕ ಮೂಲಕ ಕೊಡಲಾಗುತ್ತಿದೆ.

ಹೆಂಡತಿ ಭಾಷಣ ಕೇಳಿ ಅಸ್ವಸ್ಥತೆ ಗುಣವಾಯಿತು

ಇಟಲಿಯ ಒಂದು ಆಸ್ಪತ್ರೆಯಲ್ಲಿ ಓರ್ವ ಬ್ರಿಟಿಷ್ ಯೋಧನು ಕಠಿಣ ಖಾಯಿಲೆಯಿಂದ ನರಳುತ್ತಿದ್ದನು. ಖಾಯಿಲೆಯ ನರಳಾಟದಲ್ಲಿ ಒಂದೇಸವನೆ ಹೆಂಡತಿಯ ಹೆಸರೆತ್ತಿ ಕೂಗುತ್ತಿದ್ದ. ಸೈನ್ಯದ ಯೋಗಕ್ಷೇಮ ವಿಚಾರಿಸುವ ಅಧಿಕಾರಿಗಳು ಕೂಡಲೇ ಯುದ್ಧ ಕಚೇರಿ ಬ್ರಾಟ್‌ಕ್ಯಾಸ್ಟ್ ಸ್ಟೇಷನ್ನಿಗೆ ವೈರ್‌ಲೆಸ್ ಮೂಲಕ, ಅವನ ಹೆಂಡತಿಯ ಮಾತು ಗಳನ್ನು ಒಂದು ಗ್ರಾಮಫೋನು ರಿಕಾರ್ಡಿನಲ್ಲಿ ಸಂಗ್ರಹಿಸುವಂತೆ ತಿಳಿಸಿದರು. ಆ ರಿಕಾರ್ಡನ್ನು ವಿಮಾನ ಕಳುಹಿಸಿ ಇಟಲಿಗೆ ತರಿಸಿಕೊಳ್ಳಲಾಯಿತು. ಆಸ್ಪತ್ರೆಯಿಂದ ನರಳುತ್ತ ಯೋಧನ ಮುಂದೆ ಆ ರಿಕಾರ್ಡು ಕೂಗಿಸಿದಾಗ ಅವನ ಮನಸ್ಸಿಗೆ ನೆಮ್ಮದಿ ದೊರೆಯಿತು. ಅಂದು ಮೊದಲ್ಗೊಂಡು ದಿನೇದಿನೇ ಅವನ ಆಸ್ವಸ್ಥತೆಯು ವಾಸಿಯಾಗುವ ಲಕ್ಷಣಗಳು ಕಂಡುಬಂದವು. (ಪ್ರ)

ಅಮೇರಿಕಾದ ಕೆಲವು ತಲಬುಗಳು

ಸಂಯುಕ್ತ ಅಮೇರಿಕಾದಲ್ಲಿ ಅತ್ಯಂತ ಹೆಚ್ಚು ತಲಬು ಪಡೆಯುವಳೆಂದರೆ ಪ್ರಸಿದ್ಧ ಹಾಲಿವುಡ್ ಕಾರ್ಮಿಕ ವಿರಾಂಡ, ಇವಳಿಗೆ ತಿಂಗಳಿಗೆ 50 ಸಾವಿರ ಪವನಿಗ ಮೇಲ್ಪಟ್ಟು ತಲಬು ದೊರೆಯುವುದು.

ನಟವರ್ಗದಲ್ಲಿ ಹೆಚ್ಚಿಗೆ ಸಂಬಳ ಪಡೆಯುವವನೆಂದರೆ ಫ್ರೆಡ್ ಮೆಕ್ಮರ್ರಿ. ಇವನ ಮಾಸಿಕ ತಲಬು 97 ಸಾವಿರ ಪವನುಗಳು.

ಅಮೇರಿಕಾದ ವ್ಯಾಪಾರಿಗಳಲ್ಲಿ ಹೆಚ್ಚಿಗೆ ತಲಬು ಸಂಪಾದಿಸುವವರೆಂದರೆ ಜನರಲ್ ಮೋಟಾರ್ಸ್ ಕಂಪೆನಿಯ ಅಧ್ಯಕ್ಷ ಚಾಲ್ಸ್ ವಿಲ್ಸನ್ನರು. ಇವರಿಗೆ ತಿಂಗಳಿಗೆ 90 ಸಾವಿರ ಪವನು ಮೇಲ್ಪಟ್ಟು ತಲಬು ದೊರೆಯುತ್ತದೆ. ಹೋಲಿವುಡ್ ದಿಗ್ದರ್ಶಕ ಲಿಯೋ ಮೆಕೇರಿ ತಿಂಗಳಿಗೆ 278 ಸಾವಿರ ಪವನಿಗೆ ಮೇಲ್ಪಟ್ಟು ಸಂಪಾದಿಸುತ್ತಾನೆ

ನಿವೃತ್ತ ಸಿಪಾಯಿಗಳು ಪಟ್ಟಣವಾಸ ಬಯಸುತ್ತಾರೆ

ನವದೆಹಲಿ ಜು 2— ಈಗ ಕೆಲಸದಲ್ಲಿರುವ ಸೈನಿಕರು ತಾವು ನಿವೃತ್ತರಾದ ಮೇಲೆ ಹಳ್ಳಿಗಳಿಗೆ ಹೋಗುವ ಬದಲು ಪಟ್ಟಣಗಳಲ್ಲಿ ಬಂದು ನೆಲಸಿ, ಕಾರ್ಖಾನೆಗಿರಣಿ, ವಾಣಿಶಾಲೆ, ವ್ಯಾಪಾರ ಸ್ಥಳಗಳಲ್ಲಿ ಕೆಲಸಮಾಡಲು ಬಯಸುತ್ತಿದ್ದಾರೆಂದು ಗೊತ್ತಾಗಿದೆ. ಇದರಿಂದ ನಮ್ಮ ಯುವಕರಿಗೆ ಸ್ವಲ್ಪ ಕಾಲ ಕ್ರಮಬದ್ಧವಾದ ಶಿಕ್ಷಣ ಕೊಟ್ಟರೆ ಅವರ ದೃಷ್ಟಿ ಮತ್ತು ಜೀವನದ ಮಟ್ಟ ಎಲ್ಲವೂ ಎಷ್ಟರ ಮಟ್ಟಿಗೆ ಬದಲಾಯಿಸುತ್ತದೆ ಬುದು ವಿದಿತವಾಗುವುದು.

ಅರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ವ್ಯಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಅಶೋಕಾ ಫಾರ್ಮೆಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

ಶಾಸ್ತ್ರೀಯ ಮತ್ತು ಅನುಭವಸಿದ್ಧವಾದ ಔಷಧಗಳು ದೊರೆಯುತ್ತವೆ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12-0

Get Medical Diplomas

At home :— Ayurvedic Homeopathic, Unani, etc Prospectus Free.

Old Indian Medical College Kotgarh, Simla

ಶಕ್ತಿಸುಧಾ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನತಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿಸುಧಾ, 1067 ಜಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫೆಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಔಷಧಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

Edited, Printed and Published by M. S. Krishna Rao, at the Satyavadi Press, Chamaraja Agrahar, Mysore